ರಾಜ್ಯದಲ್ಲಿರುವ ಲಂಬಾಣಿ ಜನಾಂಗದ ಬಗ್ಗೆ

೧೯೩೧. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಲಂಬಾಣಿ ಜನಾಂಗದ ಜನಸಂಖ್ಯೆ ಎಷ್ಟು ?

ಆ) ಲಂಬಾಣಿ ಜನಾಂಗಕ್ಕೆ ಈವರೆಗೆ ಯಾವ ಸೌಲಭ್ಯ ಒದಗಿಸಿ ಕೊಡಲಾಗಿದೆ ?

ಇ) ಅತಿ ಹಿಂದುಳಿದ ಲಂಬಾಣಿ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಸರ್ಕಾರದವರೇನಾದರೂ ಇಚ್ಛಿಸುವರೆ ?

ಈ) ರಾಜ್ಯದಲ್ಲಿರುವ ಲಂಬಾಣಿಗರ ಸಮಸ್ಯೆಯನ್ನು ಅರಿಯಲು ಹಾಗೂ ಬಗೆಹರಿಸಲು ಒಂದು ಆಯೋಗವನ್ನು ಸರ್ಕಾರದವರು ನೇಮಿಸುವರೆ ?

ಉ) ಬೆಂಗಳೂರು ನಗರ ಹಾಗೂ ಇನ್ನಿತರ ಪಟ್ಟಣಗಳಲ್ಲಿ ಲಂಬಾಣಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಸರ್ಕಾರದವರು ಉದ್ದೇಶಿಸಿರುವರೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ೧೯೭೧ನೇ ಸಾಲಿನ ಜನಗಣತಿಯ ಪ್ರಕಾರ ರಾಜ್ಯದ ಲಂಬಾಣಿ ಜನಾಂಗದ ಜನಸಂಖ್ಯೆ– ೧,೮೫,೦೨೭

ಆ) ಲಂಬಾಣಿ ಜನಾಂಗವು ಪರಿಶಿಷ್ಟ ಜಾತಿಯಾಗಿದ್ದು, ಪರಿಶಿಷ್ಟ ಜಾತಿಯವರಿಗೆ ನೀಡಲಾಗುತ್ತಿರುವ ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿದ್ದಾರೆ.

ಇ) ಇಲ್ಲ.

ಈ) ಇಲ್ಲ.

ಉ) ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳಲ್ಲಿ ಲಂಬಾಣಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸಿ ಮಂದಿರಗಳು

೧೭೫೯. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಆಡಳಿತದಲ್ಲಿದ್ದ ಪ್ರವಾಸಿ ಮಂದಿರಗಳನ್ನು ಯಾವಾಗ ಲೋಕೋಪಯೋಗಿ ಇಲಾಖೆ ತೆಗೆದುಕೊಳ್ಳಲಾಗುವುದು.

ಆ) ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಂತಹ ಪ್ರವಾಸಿ ಮಂದಿರಗಳ ಒಟ್ಟು ಸಂಖ್ಯೆ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಆಗತ್ಯ ಬಿದ್ದಾಗ ಹಣದ ಲಭ್ಯತೆಗೆ ಅನುಗುಣವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಬೇಕಾಗುತ್ತದೆ.

ಆ) ೨೪ ಪ್ರವಾಸಿ ಮಂದಿರಗಳು ಈಗ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ವಶವಿದೆ.

ಕರ್ನಾಟಕ ರಾಜ್ಯದಲ್ಲಿ ಭಿಕ್ಷುಕರ ಸ್ಥಿತಿ ಸುಧಾರಿಸುವ ಬಗ್ಗೆ

೧೫೦೩. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?